ಬಿಟ್ಟಿದಿಯೇನೋ' ಎಂದು ಎದ್ದು, ಮುಖದ ಮೇಲೆ ಬಾಗಿಲು ಮುಚ್ಚಿಬಿಡುತ್ತಿದ್ದರು.

ಒಂದು ದಿನ ಆ ಕೋಪ ಇನ್ನೂ ಹೆಚ್ಚಾಯಿತು. ಕೊನೆಯ ಮನೆಯಾಕೆ, ಎದುರುಮನೆ ಮಲ್ಲಿಕಾಳ ಮನೆಗೆ ಬಂದು ಹೋಗುತ್ತ ಇವರ ಮನೆ ಗಿಡದ ಕಡೆ ನೋಡುತ್ತಾ, 'ಇಷ್ಟು ಚೆನ್ನಾಗಿ ಬೆಳೆದಿರುವ ಗಿಡ ಯಾಕಪ್ಪಾ ಹೂ ಬಿಡ್ತಿಲ್ಲ? ಏನಾದರು ಹೇಳಿ, ಬೆಳೆಸುವ ಕೈಗುಣದಲ್ಲೂ ಇರುತ್ತೆ' ಅಂದ್ಬಿಟ್ಟದ್ದು ಕೇಳಿ, ಮೈ ಉರಿದುಹೋಯಿತು ಆಕೆಗೆ. ದಡಾರಂತ ಬಾಗಿಲು ಹಾಕ್ಬಿಟ್ಟು, ಮಂದಾರದ ಕಡೆ, 'ನೋಡು, ನಿನ್ನಿಂದ ಈ ವಯಸ್ಸಿನಲ್ಲಿ ನಾನು ಇಂಥಾ ಮಾತುಗಳನ್ನು ಕೇಳುವ ಹಾಗಾಗಿದೆ' ಎಂದು ನೊಂದುಕೊಂಡರು.

ಗಾಳಿಗೆ ಅಲ್ಲಾಡುತ್ತಿದ್ದ ಮಂದಾರವನ್ನು ನೋಡಿ, 'ಓಹೋ! ನಗ್ತಾ ಇದೆಯಾ? ನಾಚಿಕೆ ಕೆಟ್ಟವಳ ಮುಖಕ್ಕೆ ನಗುವೇ ಸಿಂಗಾರವಂತೆ! ಮಕ್ಕಳನ್ನ ಹೆರೊಕ್ಕಾಗತ್ತೆ, ಅವರ ಹಣೆಬರಹವನ್ನ ಬರೆಯುಕ್ಕಾಗುತ್ತಾ?' ಎನ್ನುವ ಹಾಗೆ, ಗಿಡವನ್ನು ಬೆಳೆಸಕ್ಕಾಗತ್ತೆ, ಅದರಲ್ಲಿ ಹೂವು ಬಿಡಿಸೊಕ್ಕೆ ನಮ್ಮ ಕೈಯಲ್ಲಿರುತ್ತಾ? ಏನೇ, ನನ್ಮೇಲೆ ಸ್ವಲ್ಪವಾದರೂ ಗೌರವ ಇದ್ದರೇ ಹೀಗಿರ್ತಿದ್ಯಾ? ಇಷ್ಟು ದಿನವಾದರು ಒಂದು ಮೊಗ್ಗಿಲ್ಲ, ಹೂವಿಲ್ಲ! ನಾನು ನಿನಗೆ ಮಾಡಿರುವ ಗೊಬ್ಬರ, ಮುದ್ದು-ಮುಚ್ಚಟೆ ನಿನ್ನನ್ನ ಕೆಡಿಸಿ ಬಿಟ್ಟಿದೆ. ನಿನಗಿವತ್ತು ಊಟವಿಲ್ಲ' ಎಂದು ಬಿಟ್ಟು, ನೀರಾದರೂ ಹಾಕದೆ, ತಾನು ಮಾತ್ರ ಊಟ ಮಾಡಿ, ಹಾಗೇ ಬೆನ್ನು ಕೆಳಗೆ ಹಾಕಿದರು. ಎಷ್ಟು ಪ್ರಯತ್ನ ಮಾಡಿದರೂ ಕಣ್ಣು ಮೇಲೆ ನಿದ್ರೆ ಬಂದರೆ ತಾನೆ! ಕೊನೆಗೆ, ಮಂಚದ ಮೇಲಿಂದ ಇಳಿದು, 'ಹಾಳಾದ ಮನಸು... ಬೈದರೂ ತಾನೇ.....ಹತ್ತಿರಕ್ಕೆ ಸೇರಿಸಿದರೂ ತಾನೇ' ಎಂದುಕೊಂಡು ಒಂದು ತಂಬಿಗೆಯಷ್ಟು ನೀರು ತಂದು ಗಿಡಕ್ಕೆ ಸುರಿದು, ಹೋಗಿ ಮಲಕ್ಕೊಂಡರು.

ಬೆಳಗ್ಗೆ ಬಂದ ಕೆಲಸದವಳು ಕಿಟಿಕಿ ಹತ್ತಿರಕ್ಕೆ ಬಂದು ನೋಡಿ, 'ಅಮ್ಮಾವ್ರೇ.... ಅಮ್ಮಾವ್ರೇ..'ಎಂದು ಕೂಗಲು ಶುರು ಮಾಡಿದಳು.

ದಡಬಡಿಸಿ ಎದ್ದು ಬಂದಿದ್ದ ದುರ್ಗಮ್ಮನವರು ಕಿಟಿಕಿಯ ಕಡೆ ನೋಡಿ ಚಕಿತರಾಗಿ ಬಿಟ್ಟರು. ಚಿಕ್ಕದಾದ... ಕೆಂಪಾದ ಮೊಗ್ಗು. ಗಿಡದಲ್ಲಿ ಕೆಂಪಗೆ ಕುಂಕುಮ ತಿಲಕವಿಟ್ಟಹಾಗೆ! ಅವರ ಸಂತೋಷಕ್ಕೆ ಸೀಮೆ ಇಲ್ಲ. ಗಿಡವನ್ನು ಮುದ್ದಾಡಿ, ಹೊಗಳಿ-ಹಾಡಿ, ಕೂಡಲೆ ರಿಕ್ಷಾ ಮಾಡಿಕೊಂಡು ಅಮ್ಮನವರ ದೇವಸ್ಥಾನಕ್ಕೆ ಹೋಗಿ, ಅರ್ಚನೆ, ಪ್ರದಕ್ಷಣೆ ಎಲ್ಲವೂ ಮಾಡಿ ಮನೆಗೆ ಬರುವಾಗ ಹೊಸ ಕುಂಡವನ್ನೂ ಕೊಂಡುಕೊಂಡು ಬಂದರು.

ಆದರೆ, ಅದನ್ನ ಪಕ್ಕಕ್ಕಿಟ್ಟು, 'ಹೂವು ಬಿಟ್ಟು ಸಂಭ್ರಮ ತೀರಿದ ನಂತರ ಬದಲಾಯಿಸೋಣ ಬಿಡು' ಎಂದು ಯೋಚಿಸಿ, ಇಡೀ ದಿನ ಗಿಡವನ್ನೇ ನೋಡುತ್ತಾ ಕಾಲ ಕಳೆದರು. ಎರಡೇ ದಿನಗಳಲ್ಲಿ, ' ಭೂಗೋಳದಷ್ಟು..ಅಲ್ಲ....ಅಲ್ಲ... ಸೂರ್ಯಬಿಂಬದಷ್ಟು! ದೊಡ್ಡ ಮಂದಾರ ಹೂವು!' ಅಜ್ಜಿಯ ಕಣ್ಣು ತೇವಗೊಂಡಿತ್ತು. ಕಣ್ಣಲ್ಲಿ ತುಂಬಿದ ನೀರಿನಿಂದ ಹೂವನ್ನು ಸರಿಯಾಗಿ ನೋಡಲಾಗದೆ, ಕಣ್ಣೊರೆಸಿಕೊಂಡು...ಹೂವನ್ನು ಮತ್ತು ಮತ್ತು ನೋಡಿ ಸಂಭ್ರಮ ಪಟ್ಟಿದ್ದರು. ಇಷ್ಟರಲ್ಲೇ ಬೀದಿ ಮಂದಿಗೆಲ್ಲರಿಗೂ ಈ ಸುದ್ದಿ ಹಬ್ಬಿ, ಎಲ್ಲರೂ ಬಂದು ನೋಡಿದ್ದೇ...ನೋಡಿದ್ದು!.

ಅಯ್ಯೋ, ಊರಿನವರೆಲ್ಲರ ದೃಷ್ಟಿ ಬಿತ್ತಪ್ಪಾ ಎಂದು, ಅಜ್ಜಿ ಎಲ್ಲರಿಗೂ ಪಾಯಸ ಮಾಡಿ ಹಂಚಿದರು. ಯಾರೂ ಹೂವಿನ ಹತ್ತಿರ ಹೋಗದಂತೆ ಕೆಲಸದವಳನ್ನ ಕಾವಲು ಇಟ್ಟಿದ್ದರು. ಆವತ್ತು ಆ ಬೀದಿಯಲ್ಲಿ ದೊಡ್ಡ ಸಂಭ್ರಮವೇ ನಡೆಯಿತು. ಎಲ್ಲರೂ 'ಮಂದಾರ'ವನ್ನು ನೋಡಿ ತಮ್ಮತಮ್ಮ ಮನೆಗಳಿಗೆ ಸೇರಿದ್ದರು.

ಅಜ್ಜಿ ಮಂದಾರವನ್ನು ಹಾಗೆ ನೋಡುತ್ತಾ ನಿಂತುಕೊಂಡು, 'ಎಲೇ ಮಂದಾರವೇ, ನನ್ನ ಜೀವನವನ್ನೇ ಬದಲಾಯಿಸಿಬಿಟ್ಟಿದಿಯಲ್ಲೇ! ಬಾಗಿಲು ಮುಚ್ಚಿಕೊಂಡು, ಯಾವಾಗಲೂ ಈ ಲೋಕವನ್ನು, ನನ್ನನ್ನು ಬೈದುಕೊಳ್ಳುತ್ತಾ ಒಂಟಿಯಾಗಿ ಬದುಕುತ್ತಿದ್ದೆ. ಅಂಥ ನನ್ನ ಜೀವನದಲ್ಲಿ ಎಷ್ಟೊಂದು ಸಂತೋಷ, ಶಾಂತಿಯನ್ನು ತಂದಿದ್ದಿಯೇ. ಈ ಪ್ರಪಂಚವೇ ಭಗವಂತನ ಹೂದೋಟ. ಅದರಲ್ಲಿ ಗಿಡ-ಮರ, ಬೆಟ್ಟ-ಗುಡ್ಡ, ಸೂರ್ಯ-ಚಂದ್ರ- ತಾರೆಯರು, ಝರಿ-ನದಿ-ಸಮುದ್ರ ಎಂದು ಎಷ್ಟೊಂದು ಸೌಂದರ್ಯ ತುಂಬಿದೆ! ಎಲ್ಲವೂ ನಮಗೆ ಸುಖ-ಸಂತೋಷ ಕೊಡುವುದಕ್ಕೆ ತಾನೆ! ಅವನ್ನೆಲ್ಲಾ ಬಿಟ್ಟು-

ಗಂಡ ಹೋಗ್ಬಿಟ್ಟನೆಂದೋ, ಮಗ ಬರಲಿಲ್ಲವೆಂದೋ, ಒಂಟಿಯಾಗ್ಬಿಟ್ಟೆನೆಂದೋ ಕೊರಗುತ್ತಿದ್ದೆ. ಇನ್ನೂ ಎಷ್ಟು ದಿನ ಈ ಜೀವನವೆಂದು ಬೈದುಕೊಳ್ಳುತ್ತಿದ್ದೆ. ನೋಡು, ಎಂಥಾ ಹುಚ್ಚಿ ನಾನು. ಅದಕ್ಕೇ ನಿನ್ನನ್ನು ಕಳುಹಿಸಿ ಕೊಟ್ಟಿದ್ದಾನೆ ಆ ದೇವನು. ಪ್ರಕೃತಿಯಲ್ಲಿರುವ ಅನಂದವನ್ನು, ಸೌಂದರ್ಯವನ್ನು ತೋರಿಸಿಕೊಟ್ಟ. ನಿನ್ನಿಂದ ನನ್ನ ಜೀವನದಲ್ಲಿ ಸಂತೃಪ್ತಿ ತುಂಬಿದೆ. ಜೀವನದ ಪರಿಪೂರ್ಣತೆಯ ದರ್ಶನವಾಗಿದೆ. ನಿನ್ನಿಂದ, ಎಷ್ಟೋ ಕಾಲದ ನಂತರ ದೇವಸ್ಥಾನಕ್ಕೆ ಹೋದೆ. ಊರು, ಪೇಟೆ ನೋಡಿದೆ... ಅತ್ತೆ...ನಕ್ಕೆ... ಕೊನೆಗೆ ಅಸೂಯೆಪಟ್ಟೆ... ಹತ್ತು ಜನಕ್ಕೆ ಪಾಯಸವನ್ನು ಹಂಚಿದೆ. ಮಾತುಕತೆ ಆಡಿದೆ. ನಿನ್ನಿಂದ ಮನುಷ್ಯಳಾದೆ' ಎಂದು ಮಂದಾರವನ್ನು ತಬ್ಬಿಕೊಂಡು ಮುದ್ದಾಡಿದರು. 'ನಿನ್ನನ್ನು ಕಿತ್ತು ಜಡೆಗೋ..ಗುಡಿಗೋ.. ಕೊಡೊಲ್ಲ. ಇಲ್ಲೇ ನಿಮ್ಮಮ್ಮನಲ್ಲೇ ಇರು. ಮಗು ದೂರವಾದರೆ ತಾಯಿಗೆ ಆಗುವ ನೋವು ನನಗೆ ಗೊತ್ತು. ಬಾಡಿದರೂ ನಿನ್ನ ಮಡಿಲಲ್ಲೇ.... ಉದುರಿದರೂ ನಿನ್ನ ಮಡಿಲಲ್ಲೇ' ಎಂದು ಹೇಳಿ, ಮತ್ತೊಂದು ಮುತ್ತು ಕೊಟ್ಟು, ಒಳಕ್ಕೆ ಹೋಗಿ ಪ್ರಶಾಂತವಾಗಿ ಮಲಗಿಕೊಂಡರು. ಮರುದಿನದಿಂದ ತಾನು ರಚಿಸ ಬಹುದಾದ ಸುಂದರ ಜೀವನದ ಕಲ್ಪನೆಯನ್ನು ಮಾಡಿಕೊಂಡು, ಅಂದವಾದ ಕನಸುಗಳಲ್ಲಿ ತೇಲಾಡುತ್ತಾ ನಿದ್ರೆಯ ಮಡಿಲಿಗೆ ಜಾರಿಕೊಂಡರು ದುರ್ಗಮ್ಮಜ್ಜಿ!





# ಪ್ರೀತಿ ಪ್ರೇಮ ಇತ್ಯಾದಿ

ಸಿ.ಎನ್. ಮುಕ್ತಾ

ಕಾಫಿ ತಂದುಕೊಟ್ಟ ಭವಾನಿಯನ್ನು ಶಿವರಾಂ ಕೇಳಿದರು, ಶಿಲ್ಪಾ ಇನ್ನೂ ಎದ್ದಿಲ್ಲವೇನೆ?'

'ನೀವು ಬೆಳಿಗ್ಗೆಯಿಂದ 5ನೇ ಸಲ ಈ ಪ್ರಶ್ನೆ ಕೇಳ್ತಿದ್ದೀರ. ಇವತ್ತು ಅವಳಿಗೆ ರಜ ಇದೆ. ನಿಧಾನವಾಗಿ ಏಳಲಿ ಬಿಡಿ' ಭವಾನಿ ಹೇಳಿದರು.

'ನಿನಗೆ ನನ್ನ ಆತಂಕ ಅರ್ಥವಾಗ್ತಿಲ್ಲ....'

'ಆತಂಕ ಪಡುವಂತಹದ್ದು ಏನಾಗಿದೆ?'

'ನೀನು ಕೂತ್ಕೋ ಹೇಳ್ತೀನಿ....'

'ಪುನಃ ಹಾಡಿದ್ದೇ ಹಾಡಬೇಡಿ. ನಿಮ್ಮ ಫ್ರೆಂಡ್ ಒಳ್ಳೆಯವರಿರಬಹುದು. ಅವರ ಮಗ ಚೆನ್ನಾಗಿದ್ದಾನೆ. ಒಳ್ಳೆಯ ಕಂಪನಿಯಲ್ಲಿ ಇಂಜಿನಿಯರ್, ಒಪ್ಪಿಕೊಳ್ಳೋಣ. ಆದರೆ ಹುಡುಗೀಗೂ ತನ್ನ ಅಭಿಪ್ರಾಯ ಹೇಳುವುದಕ್ಕೆ ಸ್ವಾತಂತ್ರ್ಯ ಇರಬೇಕು ತಾನೆ? ಮದುವೆ ವಿಚಾರದಲ್ಲಿ ಒತ್ತಾಯ ಒಳ್ಳೆಯದಲ್ಲಾರಿ....'

'ನಾನು ಒತ್ತಾಯ ಮಾಡ್ತಿಲ್ಲ. ಅಂತಹ ಒಳ್ಳೆಯ ಹುಡುಗನ್ನ ಇವಳು ಯಾಕೆ ಬೇಡ ಎಂದಳು ಅನ್ನುವುದು ನನಗೆ ಗೊತ್ತಾಗಬೇಕು.'

'ಅವಳು ಏಳುವವರೆಗೂ ಸುಮ್ಮನಿರಿ. ಆ ಹುಡುಗಿ ನೆಮ್ಮದಿಯಿಂದ ಮಲಗುವುದಕ್ಕೂ ಬಿಡಲ್ಲವಾ ನೀವು?'

ಶಿಲ್ಪಾ ತಂದೆ-ತಾಯಿಯರ ಸಂಭಾಷಣೆ ಕೇಳಿಸಿಕೊಳ್ಳುತ್ತಾ ಮಲಗಿದ್ದಳು. ಅವರಿಬ್ಬರೂ ಹಾಲ್‌ನಲ್ಲಿ ಮಾತನಾಡುತ್ತಿದ್ದುದು ಅವಳಿಗೆ ಸ್ಪಷ್ಟವಾಗಿ ಕೇಳಿಸಿತ್ತು. ತಕ್ಷಣ ಅವಳಿಗೆ ಸಂತೋಷ್ ನೆನಪಾಗಿದ್ದ.

ಸಂತೋಷ್ ಶಿವರಾಂ ಸ್ನೇಹಿತ ರಾಮರಾಯರ ಮಗ. ಎಂ.ಟೆಕ್ ಮಾಡಿ ಒಳ್ಳೆಯ ಕಂಪನಿಯಲ್ಲಿ ಕೆಲಸದಲ್ಲಿದ್ದ. ನೋಡಲು ತುಂಬಾ ಚೆನ್ನಾಗಿದ್ದ. ಶಿಲ್ಪಳೂ ಚೆಲುವೆಯೆ. ಬಿ.ಇ. ಮಾಡಿ ಕಂಪನಿಯೊಂದರಲ್ಲಿ ಕೆಲಸದಲ್ಲಿದ್ದಳು. ಅವಳಿಗೂ ಮೊದಲಿಂದಲೂ ತನ್ನ ಫೀಲ್ಡ್‌ನಲ್ಲಿರುವ ಸುಂದರ ತರುಣನನ್ನೇ ಮದುವೆಯಾಗಬೇಕೆನ್ನುವ ಆಸೆಯಿತ್ತು. ರಾಮರಾವ್ 'ನಕ್ಷತ್ರಗಳು ಕೂಡಿದರೆ ಸಾಕು. ಜಾತಕ ನೋಡುವುದು ಬೇಡ' ಎಂದಿದ್ದರು. ನಕ್ಷತ್ರಗಳು ಕೂಡಿದ್ದವು. ಸಂತೋಷ್, ಅವನ ತಾಯಿ-ತಂದೆ, ಸಂತೋಷ್ ಸೋದರತ್ತೆ ಅವಳನ್ನು ನೋಡಲು ಬಂದಿದ್ದರು. ಶಿಲ್ಪಾಳಿಗೆ ಅವರ ಆಗಮನ ಅನಿರೀಕ್ಷಿತವಾಗಿತ್ತು. ಅವಳು ಹೊರಗೆ ಹೋಗಲು ಒಂದು ಬಿಳಿಯ ಬಣ್ಣದ ಚೂಡಿದಾರ್ ಧರಿಸಿದ್ದಳಷ್ಟೆ.

ಶಿವರಾಂ ಆಶ್ಚರ್ಯದಿಂದ ಸ್ವಾಗತಿಸಿದ್ದರು. 'ಇದೇನೋ ರಾಮು ಹೀಗೆ ದಿಢೀರ್ ಪ್ರತ್ಯಕ್ಷವಾಗಿದ್ದೀಯ?'

'ಇಲ್ಲೇ ಸಂತೋಷ್ ಫ್ರೆಂಡ್ ಮನೆಗೆ ಸತ್ಯನಾರಾಯಣ ಪೂಜೆಗೆ ಬಂದಿದ್ದೆವು. ಪೂಜೆ ಆಯ್ತು. ಊಟ ಲೇಟೂಂತ ಗೊತ್ತಾಯ್ತು. ಅದಕ್ಕೆ ನಿಮ್ಮನೆಗೆ ನುಗ್ಗಿದೆವು....'

'ಆದರೂ....'

'ಯೋಚನೆ ಮಾಡಬೇಡಯ್ಯ. ಹಿಂದಿನ ಕಾಲದ ತರಹ ಹುಡುಗೀನ್ನ ನೋಡಲು ಬಂದಾಗ ಉಪ್ಪಿಟ್ಟು, ಕೇಸರಿಭಾತ್ ತಿನ್ನಲೇಬೇಕು ಅನ್ನುವ ನಿಯಮ ನನಗಿಲ್ಲ. ನಿನ್ನ ಮಗಳು ರೇಷ್ಮೆ ಸೀರೆ ಉಟ್ಟುಕೊಂಡು ಹೆದರಿಕೊಂಡು ನಮ್ಮ ಮುಂದೆ ಬರೋದು ಬೇಡ. ಅವಳನ್ನು ಕರೆದು ಪರಿಚಯ ಮಾಡಿಸು ಸಾಕು.'

ಶಿಲ್ಪಾಗೆ ಅವರ ನೇರವಾದ ಮಾತುಗಳು ಇಷ್ಟವಾಗಿದ್ದವು. ಹುಡುಗನೂ ಅವಳ ಕಲ್ಪನೆಯ ರಾಜಕುಮಾರನಂತಿದ್ದ. ಆಗಲೇ ಸಂತೋಷ್ ಕೇಳಿದ್ದ. 'ನಾನು ನಿಮ್ಮ ಮಗಳ ಜೊತೆ ಮಾತಾಡಬಹುದಾ?'

ಶಿಲ್ಪಾ ಅವನನ್ನು ಮಹಡಿ ಮೇಲಿದ್ದ ಬಾಲ್ಕನಿಗೆ ಕರೆದೊಯ್ದಿದ್ದಳು. ಅವನು ಅವಳ ಓದು, ಕೆಲಸ, ಹವ್ಯಾಸದ ಬಗ್ಗೆ ಮಾತಾಡಿದ್ದ. ತನ್ನ ಬಗ್ಗೆಯೂ ಹೇಳುತ್ತಾ ಆ ಬಾಂಬ್ ಸಿಡಿಸಿದ್ದ. ಅದನ್ನು ತಂದೆಗೆ ಹೇಳಿ ತಂದೆ ರಾಮರಾಯರಿಗೆ ಹೇಳಿದರೆ ಅವರ ಮನೆಯಲ್ಲಿ ಯಾವ ರಾಮಾಯಣವಾಗುತ್ತದೋ ಎಂಬ ಭಯ ಅವಳನ್ನು ಕಾಡುತ್ತಿತ್ತು.

ಅವಳು ಎದ್ದು ಮುಖ ತೊಳೆದು ಹೊರಗೆ ಬಂದಳು.

'ಭವಾನಿ ಶಿಲ್ಪಾ ಎದ್ದಳು. ಕಾಫಿ ತೊಗೊಂಡು ಬಾರೆ.'

ಭವಾನಿ ಕಾಫಿ ತಂದವರು ಮಗಳ ಎದುರು ಕುಳಿತಳು. ಶಿಲ್ಪಾ ಕಾಫಿ ಕುಡಿಯುತ್ತಾ ಪೇಪರ್ ಕೈಗೆ ತೆಗೆದುಕೊಂಡಳು.

'ಶಿಲ್ಪಾ ಪೇಪರ್ ಆಮೇಲೆ ಓದು. ಮೊದಲು ನನ್ನ ಪ್ರಶ್ನೆಗೆ ಉತ್ತರ ಹೇಳು.'

'ಅಪ್ಪ ನಾನು ಮದುವೆಯಾಗುವ ಹುಡುಗನನ್ನು ಆಯ್ಕೆ ಮಾಡುನ ಸ್ವಾತಂತ್ರ್ಯ ನನಗಿಲ್ಲವಾ?'

'ಇಲ್ಲಾಂತ ನಾನೆಲ್ಲಿ ಹೇಳಿದೆ? ನಾನು ನಿನ್ನನ್ನು ಸಂತೋಷ್ನನ್ನೇ ಮದುವೆಯಾಗೂಂತ ಒತ್ತಾಯ ಮಾಡ್ತಿಲ್ಲಮ್ಮ. ಅವನನ್ನು ಯಾಕೆ ಬೇಡಾಂದೆ ಅಂತ ಹೇಳು....'

'ಆಯ್ತು ನಾನು ಹೇಳ್ತೀನಿ. ಆದ್ರೆ ನೀನು ಈ ವಿಚಾರ ನಿನ್ನ ಫ್ರೆಂಡ್‌ಗೆ ಹೇಳಬೇಡ. ನಮ್ಮ ಹುಡುಗೀಗೆ ಯಾಕೋ ಮನಸ್ಸಿಗೆ ಬಂದಿಲ್ಲ' ಅಂತ ಹೇಳಿಬಿಡು.

'ಆಯ್ತು ಹಾಗೇ ಹೇಳ್ತೀನಿ. ಮೊದಲು ಕಾರಣ ಹೇಳು.'

'ಅವರು ತುಂಬಾ ನಾರ್ಮಲ್ ಆಗಿ ಮಾತಾಡಿದ್ರು. ನನಗೆ ಅವರ ಮಾತು-ಕಥೆ ಎಲ್ಲವೂ ಇಷ್ಟವಾಗಿದ್ದವು. ಆದರೆ ಈ ಮಧ್ಯೆ ಒಂದು ಪ್ರಶ್ನೆ ಕೇಳಿದ್ರು....'

'ಏನಂತ ಕೇಳಿದ್ರು?'

'ನೀವು ಯಾರನ್ನಾದರೂ ಈಗಾಗಲೇ ಪ್ರೀತಿಸಿದ್ದೀರಾ?' ಅಂತ ಕೇಳಿದ್ರು. ನಾನು 'ಓದುವಾಗ ನನಗೆ ಓದು, ಕೆರಿಯರ್ ಮುಖ್ಯವಿತ್ತು. ಆದ್ದರಿಂದ ಪ್ರೀತಿ-ಪ್ರೇಮದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ನನಗೆ ಅರೇಂಜ್ಡ್ ಮ್ಯಾರೇಜ್ ಇಷ್ಟವಿರೋದ್ರಿಂದ ಈಗಲೂ ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ' ಅಂದೆ.

'ವೆರಿಗುಡ್....ವೆರಿಗುಡ್' ಶಿವರಾಂಗೆ ಮಗಳ ಮಾತು ಕೇಳಿ ಖುಷಿಯಾಯಿತು.

ಅವರು 'ನಾನು ಓದುವಾಗಲೇ ಒಂದು ಹುಡುಗೀನ್ನ ಪ್ರೀತಿಸಿದ್ದೆ. ಅವಳನ್ನೇ ಮದುವೆಯಾಗಬೇಕು ಅನ್ನುವ ಮನಸ್ಸೂ ಇತ್ತು. ಆದರೆ ನನಗೆ ಆ ಅದೃಷ್ಟವಿರಲಿಲ್ಲ' ಅಂದ್ರು.

'ಯಾರಂತೆ ಆ ಹುಡುಗಿ?'

'ನಾನ್ಯಾಕಪ್ಪ ಕೇಳಲಿ? ಅದನ್ನು ತಿಳಿದು ಕೊಂಡು ನನಗೇನಾಗಬೇಕಾಗಿದೆ. ಅವರು ಮಾತಾಡ್ತಿದ್ರು ನಾನು 'ಹೋಗೋಣ ಎಲ್ರೂ ಕಾಯ್ತಿರ್ತಾರೆ ಅಂತ ಹೊರಡಿಸಿಕೊಂಡು ಕರ್ಕೊಂಡು ಬಂದೆ.'

'ಸರಿಯಮ್ಮ. ಆ ಹುಡುಗ ಬೇರೆ ಹುಡುಗೀನ್ನ ಇಷ್ಟಪಟ್ಟಿದ್ದಾಂತ ತಿಳಿದ ಮೇಲೆ ನೀನು ಅವನನ್ನು ಮದುವೆ ಆಗುವ ಅವಶ್ಯಕತೆಯಿಲ್ಲ ಹೋಗಮ್ಮ, ಆರಾಮವಾಗಿರು' ಎಂದರು ಶಿವರಾಂ.

ಒಂದು ವಾರ ಕಳೆಯಿತು. ಒಂದು ಸಾಯಂಕಾಲ ಶಿಲ್ಪಾ ಮನೆಗೆ ಬರುವ ವೇಳೆಗೆ ರಾಮರಾವ್ ಹೆಂಡತಿ ಮಗನ ಜೊತೆ ಬಂದು ಕುಳಿತಿದ್ದರು. ಶಿಲ್ಪಾ ಅವರನ್ನು ನೋಡಿ ಕೊಂಚ ತಬ್ಬಿಬ್ಬಾದಳು.

'ಗಾಬರಿಯಾಗಬೇಡಮ್ಮ, ಹೋಗಿ ಫ್ರೆಶ್ ಆಗಿ ಬಾ. ಕಾಫಿ ಕುಡೀತಾ ಮಾತಾಡೋಣ.'

ಅವಳು ಏನೂ ಹೇಳಲಾಗದೆ ಒಳಗೆ ಹೋಗಿ ಫ್ರೆಶ್ ಆಗಿ ಬಂದಳು. ಭವಾನಿ ಕಾಫಿ, ಬಿಸ್ಕತ್ ತಂದಿತ್ತರು. ಸಂತೋಷ್ ಯಾಕೋ ಮುಖ ಊದಿಸಿಕೊಂಡು ಕುಳಿತಿದ್ದ.

'ನೋಡಮ್ಮ ಶಿಲ್ಪಾ ನೀನು ಯಾಕೆ ಸಂತೋಷನ್ನ ಬೇಡಾಂದೆ ಅಂತ ನಿಮ್ಮಪ್ಪ ಹೇಳಿದ.'

ಶಿಲ್ಪಾ ತಂದೆಯ ಕಡೆ ನೋಡಿದಳು.

'ನನ್ನ ಮಗ ಹೇಳಿದ್ದು ನಿಜ. ಅವನು ಓದುವಾಗ ಒಂದು ಹುಡುಗೀನ್ನ ಇಷ್ಟಪಟ್ಟಿದ್ದ. ಆದರೆ ಅವಳನ್ನು ಮದುವೆಯಾಗಕ್ಕೆ ಆಗಲಿಲ್ಲ ಯಾಕೆ ಗೊತ್ತಾ?'

ಶಿಲ್ಪಾ ಮಾತಾಡಲಿಲ್ಲ.

'ಅವಳ ಹತ್ರ ಇವನು ಒಂದು ದಿನವೂ ಮಾತಾಡಲಿಲ್ಲ. ನಾನು ಇಷ್ಟ ಪಟ್ಟಿದ್ದೀನಿ ಅಂತ ಹೇಳಲಿಲ್ಲ. ಅವಳು ಇವನನ್ನು ಇಷ್ಟಪಟ್ಟಿದ್ದಾಳೋ ಇಲ್ಲವೋ ಗೊತ್ತಾಗಲಿಲ್ಲ. ಅಷ್ಟರಲ್ಲಿ ಆ ಹುಡುಗಿ ಮದುವೆಯಾಗಿ ಕಾಲೇಜು ಬಿಟ್ಟಳು. ಇದೇಮ್ಮ ಇವನ ಪ್ರೇಮ ಕಹಾನಿ....'

ಶಿಲ್ಪಾಗೆ ನಗೆ ತಡೆಯಲಾಗಲಿಲ್ಲ. ಅವಳು ನಗುತ್ತಾ ಸಂತೋಷನತ್ತ ನೋಡಿದಳು. ಅವನ ಮುಖದಲ್ಲೂ ನಗು ಅರಳಿತ್ತು.